ಬಟ್ಟೆಬರೆ ಎಂದು ಖರೀದಿ ಮಾಡಿದೆವು. ನಾನು ಮದುವೆ ಮುಗಿಯೋವರೆಗೂ ಅವಳ ಜೊತೆ ಇರುವೆನೆಂದು ಹೊರಟೆ.

ಹಾಗೇ, 'ಕೆಂಚಕ್ಕ ನೀನು ಅವಳ ಜೊತೆ ಇರು. ನಾನು ಮದುವೆ ದಿನ ಬರುವೆ. ಇಬ್ಬರೂ ಕೆಲಸ ಬಿಟ್ಟರೆ ಹೇಗೆ?' ಎಂದು ಒತ್ತಾಯದಿಂದ ಕೆಂಚಕ್ಕನನ್ನು ಕಳಿಸಿದಳು. ನಾನು, ಕೆಂಚಕ್ಕ ಹೋದೆವು. ಅರಿಶಿನ ಶಾಸ್ತ್ರ, ಮೆಹಂದಿಶಾಸ್ತ್ರ ಎಲ್ಲಾ ಒಂದು ಕನಸಿನಂತೆ ಬೇಗಬೇಗ ನಡೆದು ಹೋದವು.

ಅವಳಿಗೆ ಹೊಸ ಊರು ತಿಳಿಯದು ಎಂದು ವಿವಾಹ ನೋಂದಣಿ ಕಚೇರಿಯ ವಿಳಾಸ ಬರೆದು ಕೊಟ್ಟು ಬಂದಿದ್ದೆ. ನಾನೂ ಕಚೇರಿ ಬಳಿ ಬಂದು ಸುಮಾರು ಹೊತ್ತಾಯ್ತು. ಸೇವಂತಿ ಅಕ್ಕನ ದಾರಿ ಕಾಯ್ತಾ ಎದ್ದೆ. ಅವರಿಬ್ಬರ ಸ್ನೇಹಿತರು ಬಂದಾಗಿತ್ತು. ಸದ್ಯ ದೂರದಲ್ಲಿ ಆಟೋ ಕಂಡಿತು... ಬಂದಳೆಂದು ಸಮಾಧಾನವಾಯ್ತು. ಸೇವಂತಿ ಆಟೋ ಇಳಿದುದನ್ನು ನೋಡಿ ಆ ಕಡೆ ಧಾವಿಸಿದೆ. ಆ ಕಡೆಯಿಂದ ಇನ್ನೊಂದು ಆಟೋ ಬಂದು ನಿಂತಿತು. ಒಬ್ಬ ವಯಸ್ಸಾದ ವ್ಯಕ್ತಿ ಇಳಿದರು. ಸೇವಂತಿ ಅಕ್ಕನಿಗೆ ಆ ಮುಖ ನೋಡಿದೊಡನೆ ಆಘಾತ, ಆಶ್ಚರ್ಯ ಒಮ್ಮೆಯೇ ಆಯ್ತು. ಕಚೇರಿ ಕಡೆಗೆ ಬರುವುದನ್ನು ಬಿಟ್ಟು, ಅವರನ್ನೇ ತದೇಕಚಿತ್ತದಿಂದ ನೋಡುತ್ತಾ ನಿಂತಳು. ನಾನು ನಡುವೆ ಹೋಗುವುದು ಸರಿಯಲ್ಲ ಎನ್ನಿಸಿ ದೂರದಲ್ಲೇ ನಿಂತು ಅವರನ್ನು ನೋಡುತ್ತಿದ್ದೆ. ಅವಳನ್ನು ನೋಡಿದ ವ್ಯಕ್ತಿಗೆ ಮುಖ ಕೊಟ್ಟು ಮಾತನಾಡಲು ಆಗಲಿಲ್ಲ. ಆದರೆ, ಮನಸ್ಸು ತಡೆಯಲಿಲ್ಲ, 'ಸೇವಂತಿ ಹೇಗಿದ್ದೀಯಾ?' ಎಂದು ಮಾತನಾಡಿಸಿದರು.

'ಅವಳು ಚೆನ್ನಾಗಿದೀನಿ ಗೌಡ್ರೇ. ಎಲ್ಲಾ ನಿಮ್ಮ ಆಶೀರ್ವಾದ' ಅಂದಳು,

'ಕ್ಷಮಿಸಿಬಿಡು ಸೇವಂತಿ. ನಾನು ಆ ದಿನ ಅಸಹಾಯಕನಾಗಿದ್ದೆ' ಎಂದರು. ನನಗೆ ಖಾತ್ರಿಯಾಯಿತು. ಓ... ಇವರು ಸಂಪಕಾಳ ತಂದೆ ವೆಂಕಟಪ್ಪ ಗೌಡ ಎಂದು. ಸೇವಂತಿ ಮರು ಮಾತನಾಡಲಿಲ್ಲ. 'ಬಿಡಿ ಗೌಡರೇ ಆದದ್ದೆಲ್ಲಾ ಒಳ್ಳೆಯದಕ್ಕೇ ಅನ್ಕೊಬೇಕು' ಎಂದಳು.

'ಏನ್ ಸೇವಂತಿ ನೀನು ಇಲ್ಲಿ... ಏನಾದರೂ ಕೆಲಸವಿತ್ತಾ' ಎಂದರು.

'ಇಲ್ಲ ಗೌಡ್ರೇ ನನ್ನ ಮಗಳ ಮದುವೆ ಇತ್ತು' ಅಂದಳು.

ಅಯ್ಯೋ.... ಅವಳು ನನ್ನ ಮಗಳು. ಹುಡುಗ ಯಾರು? ಎಂದೆಲ್ಲಾ ಪ್ರಶ್ನಿಸಬೇಕಾದ ಗೌಡರು, ಮರು ಮಾತನಾಡದೇ, 'ಹೌದಾ... ಸರಿ ಸೇವಂತಿ ಆಮೇಲೆ ನಿಧಾನವಾಗಿ ಕುಳಿತು ಮಾತಾನಾಡಿದರಾಯ್ತು' ಎಂದು ಹೊರಡಲು ಅಣಿಯಾದರು.

ಸೇವಂತಿಗೆ, ಗೌಡರು ಯಾಕೆ ಇಲ್ಲಿ ಬಂದರು ಎನ್ನುವ ಪ್ರಶ್ನೆ ಮನಸ್ಸಲ್ಲಿ ಮೊಳೆಯಿತು. ತಡಮಾಡದೇ ಬಾಯಿಂದ ದಾಟಿಸಿಯೇ ಬಿಟ್ಟಳು. 'ಗೌಡ್ರೇ ನೀವು ಹಳ್ಳಿ ಬಿಟ್ಟು ಈ ಕಡೆ ಪ್ರಯಾಣ ?'ಎಂದಳು.

'ನೋಡು ಸೇವಂತಿ. ನೀನು ಊರಿಂದ ಹೊರಟ ಮೇಲೆ ನನಗೆ ಮದುವೆ ಆಯ್ತು. ಒಬ್ಬ ಗಂಡು ಮಗ ಕೂಡ ಹುಟ್ಟಿದ. ಆದರೆ, ನನ್ನ ಹೆಂಡತಿ ಹೆರಿಗೆ ಸಮಯಕ್ಕೆ ತೀರಿಕೊಂಡಳು. ತಾಯಿಯಿಲ್ಲದ ಮಗನೆಂದು ಮುದ್ದಾಗಿ ಬೆಳೆಸಿದೆ. ಆದರೆ ಆ ದೇಸಾಯಿ ಮಗನಿಗೆ ನನ್ನ- ನಿನ್ನ ವಿಷಯ ಹೇಳಿ, ನಿಮ್ಮ ಅಪ್ಪನಿಗೆ ಮೊದಲೇ ಒಂದು ಹೆಣ್ಣಿನ ಜೊತೆಗೆ ಸಂಬಂಧವಿತ್ತು. ನಿನ್ನ ತಾಯಿಗೆ ನಿನ್ನ ತಂದೆ ಮೋಸ ಮಾಡಿದ ಕೊರಗಿತ್ತು' ಎಂದು ಚುಚ್ಚಿದ್ದ. ತಿಳಿವಳಿಕೆ ಬಂದಂತೆ ನನ್ನ ಮಗ ನನ್ನನ್ನು ದ್ವೇಷಿಸಲು ಶುರು ಮಾಡಿದ. ಈ ದ್ವೇಷ ಯಾವಮಟ್ಟಕ್ಕೆ ಎಂದರೆ ಕಾಲೇಜಿನಲ್ಲಿ ಇಷ್ಟಪಟ್ಟ ಹುಡುಗಿಯನ್ನು ನನಗೂ ತಿಳಿಸದೆ ಇಂದು ಮದುವೆಯಾಗುತ್ತಿದ್ದಾನೆ. ಅವನ ಸ್ನೇಹಿತರು ನನಗೆ ಸುದ್ದಿ ತಿಳಿಸಿದರು. ನನ್ನ ವಂಶ ಮುಂದುವರಿಸಲು ಇರುವ ಮಗ, ಸಾಕಿ ಬೆಳೆಸಿದ ಮಗನಿಗೆ ಮದುವೆ ಅಕ್ಷತೆ ಕಾಳು ಹಾಕಬೇಕು ಎಂದು ಬಂದೆ' ಎಂದರು.

ನಂತರ ಇಬ್ಬರೂ ಒಳಗಡೆ ಹೋದಮೇಲೆ, 'ಗೌಡರು ಅದೋ ಈ ಕಡೆ ತಿಳಿ ನೇರಳೆ ಬಣ್ಣದ ಅಂಗಿ ಹಾಕಿದವನು ಇರುವನಲ್ಲಾ, ಅವನೇ ನನ್ನ ಮಗ' ಎಂದು ತೋರಿಸಿದೊಡನೆಯೇ ಸೇವಂತಿಗೆ ತಾನು ಕಾಲಿಟ್ಟ ನೆಲ ಬಿರಿದಂತಾಯ್ತು.

ಮಾಸದ ಗಾಯ, ಎದೆಯಲ್ಲಿ ಉರಿಉರಿ... ಕಣ್ಣಿಗೆ ಕತ್ತಲೆ ಕವಿದು ಸೇವಂತಿಯಕ್ಕ ತಲೆ ತಿರುಗಿಬಿದ್ದಳು.

ಅಷ್ಟರಲ್ಲಿ ಗಾಬರಿಯಿಂದ ಎಲ್ಲರೂ ಅತ್ತ ಓಡಿ ಬಂದರು. ●